# ಲಲಾಟಲಿಖಿತ

ಮಾರ್ಗ ಮಧ್ಯದಲ್ಲಿ ಎದುರಾದ ವ್ಯಕ್ತಿ 'ಸಾರ್, ಯಾವುದಾದರೂ ಒಂದು ಬೆರಳನ್ನು ಮುಟ್ಟಿ' ಎಂದು ಮೂರು ಬೆರಳುಗಳನ್ನು ಮುಂದೆ ಚಾಚಿದ. ಯಾರಿಗೆ ಗೊತ್ತಿತ್ತು, ಮುಟ್ಟುವ ಬೆರಳು ನನ್ನ ಹೊಟ್ಟೆಯನ್ನೇ ಚುಚ್ಚುತ್ತದೆಂದು!

■ ಗೌತಮ
ಕಲೆ: ನಾಗಲಿಂಗ ಬಡಿಗೇರ್

ಕಣ್ಣಿಗೆ ನಾಯಿ ಬಿದ್ದು, ಕಾಲ ಹತ್ತಿರ ಕಲ್ಲಿದ್ದರೆ ಹುಡುಗನೊಬ್ಬನಿಗೆ ಅದನ್ನೆತ್ತಿ ನಾಯಿಗೆ ಬೀಸೋ ಮನಸ್ಸು ಹೇಗೆ ಬರುತ್ತೋ ಹಾಗೇನೆ ನನ್ನ ಮುಖ ನೋಡಿದ ಯಾವನಿಗಾದರೂ ಇವನನ್ನ ಆಟ ಆಡಿಸಬೇಕು ಅನ್ನಿಸದೇ ಇರೊಲ್ಲ. ಅದಕ್ಕೆ ನನ್ನ ಮುಖಲಕ್ಷಣವೇ ಕಾರಣ ಅನ್ನೋದನ್ನ ಕಂಡುಹಿಡಿದುಕೊಂಡುಬಿಟ್ಟಿದ್ದೀನಿ. ಪ್ರಾಬ್ಲಂ ಏನೂ ಅಂತಂತಂದ್ರೆ, ಅವರು ಆಟ ಆಡಿಸುವಾಗ ಅವರು ನನ್ನನ್ನ ಆಟ ಆಡಿಸ್ತಿದ್ದಾರೆ ಅನ್ನೋದು ಗೊತ್ತಾಗದೇ, ಆಮೇಲೆ ಎಷ್ಟೋ ಹೊತ್ತಾದ ಮೇಲೆ ಅದು ನನ್ನ ಅರಿವಿಗೆ ಬರೋದು. ಇದನ್ನ 'ನನ್ನ ಜೀವನ ಚರಿತ್ರೆ'ಯಲ್ಲಿ ಅದರ ಒಂದು ಭಾಗವಾಗಿ 'ಮುಖ ಲಕ್ಷಣ' ಎಂಬ ಅಧ್ಯಾಯದಲ್ಲಿ ಸವಿವರವಾಗಿ ವಿವರಿಸಿದ್ದೇನೆ.

ಐವತ್ತಿಂಚಿನ ಸುತ್ತಳತೆಯ ಹೊಟ್ಟೆಯನ್ನು ಕನಿಷ್ಠ ನಲವತ್ತೈದಿಂಚಿಗಾದರೂ ಇಳಿಸಬೇಕೆಂಬ ಎರಡು ವರ್ಷದ ಪ್ರಯಾಸಪೂರ್ವಕ ಪ್ರಯತ್ನದಲ್ಲಿ ಅದು ಅರವತ್ತಿಂಚಾಗಿತ್ತು. ಆದರೂ, ಪ್ರತಿಯೊಂದು ಸೋಲೂ ಗೆಲುವಿನ ಒಂದೊಂದು ಮೆಟ್ಟಿಲು ಅಂತ ಬಲವಾಗಿ ನಂಬಿದ್ದ ನಾನು ಪ್ರತಿನಿತ್ಯ ವಾಕಿಂಗ್ ಮಾಡುತ್ತಿದ್ದೆ. ಅಂದು ಸಂಜೆಯೂ ಹಾಗೇ ವಾಕಿಂಗ್ ಮಾಡುತ್ತಿದ್ದಾಗ ಘಮಘಮ ವಾಸನೆ ನನ್ನ ಮೂಗನ್ನು ಆಕರ್ಷಿಸಿತು. ಕಾಲುಗಳು ಯಾಕೋ ನಡೆಯೋಕೆ ಹಿಂದೇಟು ಹಾಕಿದವು.

ಮೂಗು ಕಾಲುಗಳ ನಡುವೆ ಅದೆಂಥ ಅಂಡರ್‌ಸ್ಟ್ಯಾಂಡಿಂಗೋ ಏನು ಕಥೆಯೋ? ಯಾರಿಗೆ ಗೊತ್ತು. ಕಾಲುಗಳು ಆ ಘಮಲನ್ನೇ ಅರಸುತ್ತ ಹೋದವು. ವಾಸನೆ ಹತ್ತಿರವಾಗುತ್ತಿದ್ದಂತೆ ನಡಿಗೆಯ ಸ್ಪೀಡೂ ಜೋರಾಯಿತು. ಕಟ್ಟಕಡೆಗೆ ವಾಸನೆಯ ಮೂಲದ ಮುಂದೆ ಹೋಗಿ ಕಾಲುಗಳು ನಿಂತುಬಿಟ್ಟವು. ಕಡಲೆಹಿಟ್ಟಿನಲ್ಲಿ ಅದ್ದಿ ಬಾಣಲೆಯಲ್ಲಿದ್ದ ಕಾದ ಎಣ್ಣೆಯಲ್ಲಿ ಬಿಡುತ್ತಿದ್ದ ಉದ್ದನೆ ಮೆಣಸಿನಕಾಯಿಗಳನ್ನು ಬಿಟ್ಟ ಕಣ್ಣು ಬಿಟ್ಟಂತೆ ನೋಡುತ್ತಿದ್ದಂತೆ ಬಾಯಲ್ಲಿ ಲಾಲಾರಸ ಸುರಿಯಲು ಶುರುವಾಯಿತು.

ಇನ್ನೂ ತಡ ಮಾಡಿದರೆ ಹೆಚ್ಚೂಕಡಿಮೆ ಆಗಬಹುದೆಂದೆಣಿಸಿ ಜೇಬಿಗೆ ಕೈ ಹಾಕಿ ಐವತ್ತರ ನೋಟನ್ನು 'ನಳ'ನಿಗೆ ಕೊಟ್ಟು ಕಾಯುತ್ತ ನಿಂತೆ. ಐದನೇ ಮೆಣಸಿನಕಾಯಿ ಬಾಯಲ್ಲಿ ಕರಗುತ್ತಿದ್ದ ಹಾಗೇನೆ ಬಾಣಲೆಯಲ್ಲಿ ತೇಲುತ್ತ ಬೇಯುತ್ತಿದ್ದ, ಬೇಯುತ್ತ ತೇಲುತ್ತಿದ್ದ ಬೋಂಡಗಳನ್ನು ನೋಡಲಾಗದೆ ಇನ್ನೊಂದೈವತ್ತು ಕೊಟ್ಟು ಐದು ಬೋಂಡಗಳನ್ನು ನನ್ನ ಸುಪರ್ದಿಗೆ ತೆಗೆದುಕೊಂಡೆ. ಬಾಯಲ್ಲಿ ಖಾರ, ಕಣ್ಣಲ್ಲಿ ನೀರು. ಜೀವ ತೃಪ್ತಿಯಾಗಿ ಹೋಯಿತು. ಚಿಲ್ಲರೆಗೆ ಕೈ ಒಡ್ಡಿದೆ. ಎರಡು ಕ್ಷಣ ನನ್ನ 'ಮುಖ' ನೋಡಿದ. 'ಸರಿಹೋಯ್ತು' ಅಂದ. 'ಹುಂ, ನಡೀಲಿ ನಡೀಲೀ. ಎಲ್ಲ ನಿನ್ನ ಲೀಲೆ. ತೇನವಿನಾ ತೃಣಮಪಿ ನಚಲತಿ. ನಿನ್ನ ಅಣತಿಯಿಲ್ಲದೆ ಹುಲ್ಲು ಕಡ್ಡಿಯೂ ಚಲಿಸಲ್ಲಾ. ಅಂಥಾದ್ದರಲ್ಲಿ ಉದರ ರಾಗಿಕಾಳಿನಷ್ಟೂ ಕರಗುವುದು ಸಾಧ್ಯವೇ?' ಅಂತ ಮನಸ್ಸಿನಲ್ಲೇ ಕೈಗಳನ್ನ ಮೇಲಕ್ಕೆತ್ತಿ ಪರಮಾತ್ಮನನ್ನು ಕೇಳಿದೆ. ಮನೆ ಕಡೆ ಹೆಜ್ಜೆ ಹಾಕಿದೆ, ನೆನಪಿಗೆ ಬಂದ 'ಕಸ್ತೂರಿ ನಿವಾಸ'ದ 'ಆಡಿಸುವಾತನ ಕೈ ಚಳಕದಲಿ ಎಲ್ಲ ಅಡಗಿದೆ' ಹಾಡನ್ನು ಗುನುಗಿಕೊಳ್ಳುತ್ತಾ.

ಮಾರ್ಗಮಧ್ಯದಲ್ಲಿ, ಮನೆಯೊಂದರ ಮುಂದೆ ಹೆಜ್ಜೆ ಹಾಕುತ್ತಿದ್ದಾಗ, ಇದ್ದಕ್ಕಿದ್ದಂತೆ ಗೇಟಿಗೊರಗಿ ನಿಂತಿದ್ದ ಒಬ್ಬ ವ್ಯಕ್ತಿ ದಿಢೀರನೆ ಗೇಟ್ ತೆಗೆದುಕೊಂಡು ನನ್ನ ಮುಂದೆ ಪ್ರತ್ಯಕ್ಷನಾಗಿ 'ತರ್ಜನಿ ಬೆರಳನ್ನು (ತನ್ನ) ನನಗೆ ತೋರಿಸುತ್ತ, 'ಸಾರ್, ಒಂದ್ನಿಮಿಷ' ಅಂದ. ನಾನು ನಿಂತೆ. ಏನು ಅನ್ನೋಹಾಗೆ ನೋಡಿದೆ. ಕಿರುಬೆರಳ ತುದಿಯನ್ನು ಹೆಬ್ಬೆರಳಲ್ಲಿ ಅದುಮಿ ಮಿಕ್ಕ ಮೂರು ಬೆರಳಿನ ಅಂಗೈಯನ್ನು ನನ್ನ ಮುಂದೆ ಚಾಚಿ, 'ಸಾರ್, ಯಾವುದಾದರೂ ಒಂದು ಬೆರಳನ್ನು ಮುಟ್ಟಿ' ಅಂತ ಅಪ್ಪಣೆಸಿದ. ಅವನ ಮುಖ, ಆ ಮೂರು ಬೆರಳು, ಆ ಮೂರು ಬೆರಳು... ಅವನ ಮುಖಗಳನ್ನು ಎರಡು ಮೂರು ಸಲ ನೋಡಿದೆ. ಏನಿರಬಹುದು ಅನ್ನೋ ಕುತೂಹಲ ನನ್ನ ಮನದಲ್ಲಿ ಮೂಡಿ ನಾನಾ ಯೋಚನೆಗಳು ಹರಿದಾಡಿದವು. ಅವನು ಮೂವರು ಹುಡುಗಿಯರನ್ನ ಪ್ರೀತಿಸಿರಬಹುದು. ಯಾವ ಹುಡುಗಿ ಜೊತೆ ಮದುವೆಯಾಗಬಹುದು ಅಂತ ಕೇಳುತ್ತಿದ್ದಾನೇನೋ ಅನ್ನಿಸಿ ಒಂದು ಬೆರಳನ್ನು ಮುಟ್ಟುವುದರಲ್ಲಿದ್ದೆ. ಅಷ್ಟರಲ್ಲಿ 'ಮೂವರು ಹುಡುಗಿಯರಲ್ಲ, ಒಂದು ಹುಡುಗಿಯನ್ನು ಮಾತಾಡಿಸೋ ದಮ್ಮೂ ಇಲ್ಲದ ಮುಸುಡಿ ಇದು' ಅಂತ ಅಶರೀರವಾಣಿಯೊಂದು ನನ್ನ ಕಿವಿಯಲ್ಲಿ ಪಿಸುಗುಟ್ಟಿತು. ಮತ್ತೆ ಆ ಮುಖಾನ ನೋಡಿದೆ, ಹೌದು ಅನ್ನಿಸಿತು.

ಹಾಗಾದರೆ ಅವನಿಗೆ ಈಗಾಗಲೇ ಮದುವೆಯಾಗಿರಬಹುದೇ? ಆಗಿದ್ದರೆ ಹೆಂಡತಿ ಬಸುರಿಯಾಗಿರಬೇಕು. ಎಂಥ ಮಗು ಹುಟ್ಟುತ್ತೆ ಅಂತ ಕೇಳೋ ಮನಸ್ಸಿರಬೇಕು. ಆ ಪ್ರಶ್ನೆಗೆ ಎರಡೇ ಬೆರಳು ಸಾಕಾಗ್ತಿತ್ತು. ಮೂರು ಬೆರಳು ಯಾಕೆ? ಪ್ರಶ್ನೆ ನನ್ನ ಮನಸ್ಸಿನಲ್ಲಿ ಪೂರ್ತಿಯಾಗಿ ಮೂಡುವುದಕ್ಕೆ ಮೊದಲೇ ಸಂಚಾರಿ ವಿಜಯ್ ನಟನೆಯ 'ನಾನು ಅವನಲ್ಲ, ಅವಳು' ಸಿನಿಮಾ ನೆನಪಿಗೆ ಬಂತು. ಬೆರಳನ್ನು ಮುಟ್ಟೋಕೆ ಹೋಗ್ತಿದ್ದ ಕೈಯನ್ನ ಹಿಂದಕ್ಕೆಳಕೊಂಡೆ.

ಹಾಗಾದರೆ ಇನ್ನೇನಿರಬಹುದು ಅಂತ ನನಗೆ ನಾನೇ